**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 2209/2025 ಸಿ.ಡಬ್ಲ್ಯೂ–4 ಪಿ.ಡಬ್ಲ್ಯೂ–1

| | | |
|---|---|---|
| ಹೆಸರು | ಃ | ಬಸವರಾಜ |
| ತಂದೆಃಗಂಡ | ಃ | ಚಂದ್ರಕಾಂತ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | : | ಪೋಲಿಸ್ ಪೇದೆ |
| ವಾಸಸ್ಥಳ | ಃ | ಮಾದನ ಹಿಪ್ಪರಗ |

ದಿನಾಂಕಃ 06.11.2025
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ:ಸ:ಅ ಅವರಿಂದಃ**

ನಾನು 2021 ರಿಂದ ಇಲ್ಲಿಯವರೆಗೆ ಮಾದನ ಹಿಪ್ಪರಗ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆ ಅಂತಾ ಕಾರ್ಯ ನಿರ್ವಹಿಸುತ್ತಿದ್ದೇನೆ.

ದಿಃ 22-02-2025 ರಂದು ನಾನು ಠಾಣೆಯಲ್ಲಿ ಇದ್ದಾಗ ಚಾಸ-1ರವರು ಹಿರೋಳ್ಳಿ ಗ್ರಾಮದಲ್ಲಿ ಅಕ್ರಮ ಸಾರಾಯಿ ಮಾರಟ ಮಾಡುವ ಬಗ್ಗೆ ಖಚಿತ ಬಾತ್ಮಿ ಬಂದಿದ್ದು, ನಾನು ಮತ್ತು ಚಾಸ-5ರವರು ಚಾಸ-1ರವರ ಜೋತೆಗೆ ದಾಳಿ ಮಾಡಲು ಹೋಗಬೇಕು ಎಂದು ಹೇಳಿ ಚಾಸ-5 ರವರು ಜೀಪು ಚಾಲಾನೆ ಮಾಡುತ್ತಿದ್ದರು. ನಾವು ಸರ್ಕಾರಿ ವಾಹನವಾದ ಕೆ. ಎ. 32 ಜಿ-1028 ರಲ್ಲಿ ಹೋಗಿರುತ್ತೇವೆ. ಹಿರೋಳ್ಳಿ ಗ್ರಾಮದಲ್ಲಿ ವಾಹನವನ್ನು ನಿಲ್ಲಿಸಿ ಇಬ್ಬರು ಪಂಚರಾದ ಚಾಸಾ 2 ಮತ್ತು 3 ರವರನ್ನು ಕರೆಯಿಸಿ ಅವರಿಗೆ ವಿಷಯ ತಿಳಿಸಿ ಅವರು ಒಪ್ಪಿ ಕೊಂಡ ನಂತರ ಎಲ್ಲರೂ ಕೂಡಿಕೊಂಡು ಶ್ರೇಯಸ್ ಪಾನಶಾಪ್ ಹತ್ತಿರ ಸ್ವಲ್ಪ ದೂರದಲ್ಲಿ ನಿಲ್ಲಿಸಿ ನಾವೆಲ್ಲರೂ ಅಲ್ಲಿ ಹೋಗಿ ನೋಡಿದಾಗ ಗುರುಬಸಪ್ಪ ಅವರು ಒಂದು ರಟ್ಟಿನ ಡಬ್ಬಿಯಲ್ಲಿ ಸರಾಯಿಯನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದನು. ಸದರಿ ವ್ಯಕ್ತಿಯ ಬಳಿ Original Choice Wiskyಯ 75 ಪೌಚ್ ಗಳು ಮತ್ತು 450 ರೂಪಾಯಿ ನಗದು ಹಣ ಇತ್ತು. ಅದನ್ನು ಜಪ್ತಿಪಡಿಸಿಕೊಂಡು ಪಂಚನಾಮೆಯನ್ನು 10.30 ರಿಂದ

11.30ರವರೆಗೆ ಜರುಗಿಸಿ  ಪಂಚರ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಹಾಕಿ ಜಪ್ತಿ ಪಡಿಸಿಕೊಂಡಿರುತ್ತೇವೆ. ಮರಳಿ 12.00 ಗಂಟೆಗೆ ಠಾಣೆಗೆ ಬಂದಿರುತ್ತೇವೆ.

ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.  ಸಾಕ್ಷಿಯ 90 ಎಮ ಎಲ್‌ನ ಓರಿಜನಲ್ ಚಾಯಿಸ್ 75 ಪಾಕೆಟಗಳನ್ನು ನೋಡಿ ಗುರುತಿಸಿದ್ದು  ಅವುಗಳನ್ನು ಒಟ್ಟಾಗಿ ಮು.ಮಾ. 1 ಅಂತಾ ಗುರುತಿಸಲಾಯಿತು. ಸಾಕ್ಷಿಯು ರೂ. 450/- ಹಣವನ್ನು ಗುರುತಿಸಿದ್ದು ಅದನ್ನು ಮು.ಮಾ. 2 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ. ಎಸ್ ಎಸ್ ಸಿ ವಕೀಲರಿಂದಃ</u>**

ಮಾದನ ಹಿಪ್ಪರಗ ಪೋಲಿಸ್ ಠಾಣೆ ಯಿಂದ ಹಿರೋಳ್ಳಿ ಗ್ರಾಮವು ಉತ್ತರ ದಿಕ್ಕಿಗೆ ಬರುತ್ತದೆ. ಮಾದನಹಿಪ್ಪರಗ ಗ್ರಾಮದಿಂದ ಹಿರೋಳ್ಳಿ ಗ್ರಾಮ 20 ಕಿ.ಮಿ. ಅಂತರವಿರುತ್ತದೆ. ಮಾದನಹಿಪ್ಪರಗ ಗ್ರಾಮದಿಂದ ಹಿರೋಳ್ಳಿ ಗ್ರಾಮಕ್ಕೆ ಕೇರೂರು, ಕಾಮನಹಳ್ಳಿ, ಭೀಂಪೂರ ಮಾರ್ಗವಾಗಿ ಹೋಗಿರುತ್ತೇವೆ. ಠಾಣೆಯಿಂದ ಹಿರೋಳ್ಳಿ ಗ್ರಾಮಕ್ಕೆ ಹೋಗಲು 45.00 ನಿಮಿಷ ಬೇಕಾಗುತ್ತದೆ. ನಾವು ಹಿರೋಳ್ಳಿ ಗ್ರಾಮಕ್ಕೆ ಹೋದಾಗ 09.00 ರಿಂದ 09.15 ಗಂಟೆಯಾಗಿತ್ತು. ಹಿರೋಳ್ಳಿ ಗ್ರಾಮವು ನಾವು ಬಂದ ದಾರಿಯಿಂದ ಪೂರ್ವ ದಿಕ್ಕಿನಲ್ಲಿ ಇರುತ್ತದೆ. ನಾವು ಹಿರೋಳ್ಳಿ ಗ್ರಾಮಕ್ಕೆ ಬೇಳಿಗ್ಗೆ ಹೋಗಿರುತ್ತೇವೆ. ಪಂಚರನ್ನು ನಾನೇ ಕರೆದುಕೊಂಡು ಬಂದಿರುತ್ತೇನೆ. ಶ್ರೆಯಸ್ ಪಾನ್ ಶಾಪ್ ಹಿರೋಳ್ಳಿ ಗ್ರಾಮದಿಂದ 1 ಕೀ.ಮಿ. ಅಂತರದಲ್ಲಿ ಇರುತ್ತದೆ. ಊರಿನಿಂದ  ಪಾನ್ ಶಾಪ್ ಗೆ ಹೋಗಲು 05.00 ನಿಮಿಷ ಬೇಕಾಗುತ್ತದೆ ಎಂದರೆ ಸರಿ.  ಹಿರೋಳ್ಳಿ ಗ್ರಾಮದಿಂದ ಶ್ರೇಯಸ್ ಪಾನ್ ಶಾಪ್ ಗೆ ಹೋಗುವ ಮುಂಚೆ ಒಂದು ಪೆಟ್ರೋಲ್ ಬಂಕ್ ಬರುತ್ತದೆ ಎಂದರೆ ಸರಿ. ಶ್ರೆಯಸ್ ಪಾನ ಶಾಪ್ ನಿಂದ 100 ಮೀಟರ ಅಂತರದಲ್ಲಿ ಕರ್ನಾಟಕ ಮಹಾರಾಷ್ಟ್ರ ಬಾರ್ಡರ್  ಇರುತ್ತದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಬಾಗಮ್ಮ ದೇವಿಯ ದೇವಾಸ್ಥಾನ ಇರುತ್ತದೆ ಎಂದರೆ ಸರಿ. ಸದರಿ ಜಾಗದಲ್ಲಿ ಕರ್ನಾಟಕದ ಬಾರ್ಡರ್ ನಲ್ಲಿ ಪೋಲಿಸ್ ಚೆಕ್ ಪೊಸ್ಟ ಇದ್ದು ಮಹಾರಾಷ್ಟ್ರ  ಬಾರ್ಡರ್ ನಲ್ಲಿ  ಸಹ ಪೋಲಿಸ್ ಚೆಕ್ ಪೊಸ್ಟ ಇರುತ್ತದೆ ಎಂದರೆ ಸರಿ. ಸದರಿ ಚೆಕ್ ಪೋಸ್ಟ ನಲ್ಲಿ ನಮ್ಮ ಪೋಲಿಸ್ ಠಾಣೆ ಒಬ್ಬರು ಸಿಬ್ಬಂದಿ ಕರ್ತವ್ಯದಲ್ಲಿ

ಇರುತ್ತಾರೆ ಎಂದರೆ ಸರಿ. ಸದರಿ ಚೆಕ ಪೋಸ್ಟನಿಂದ ಶ್ರೇಯಸ ಪಾನಶಾಪ್ 100 ಮೀಟರ ಅಂತರದಲ್ಲಿ ಇತ್ತು. ಶ್ರೇಯಸ ಪಾನಶಾಪ್ ಪಕ್ಕದಲ್ಲಿ ಒಂದು ಹೋಟೆಲ್ ಇರುತ್ತದೆ ಎಂದರೆ ಸಾಕ್ಷಿಯೂ ಒಂದು ಶೆಡ್ ಇತ್ತು ಎಂದು ನುಡಿಯುತ್ತಾರೆ. ಘಟನೆ ನಡೆದಾಗ ಸದರಿ ಸ್ಥಳದಲ್ಲಿ ಎರಡು ಅಂತಸ್ತಿನ ಒಂದು ಹೋಟಲ್ ಇತ್ತು ಎಂದರೆ ಸಾಕ್ಷಿಯೂ ಅದು ಇನ್ನು ಕಟ್ಟಡ ಚಾಲ್ತಿಯಲ್ಲಿತ್ತು ಎಂದು ನುಡಿಯುತ್ತಾರೆ. ಮು.ಮಾ.1 ಒಂದು ರಟ್ಟಿನ ಡಬ್ಬೆಯಲ್ಲಿ ಇದ್ದವು. ರಟ್ಟಿನ ಡಬ್ಬಿಯನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ. ಎಲ್ಲಾ 75 ಪೌಚ್ ಗಳು ಬಿಳಿ ಬಟ್ಟೆಯಲ್ಲಿ ಇದ್ದವು ಎಂದರೆ ಸರಿ. ಸದರಿ ಪೌಚ್ ಗಳು ತುಂಬಿದ್ದವು. ಸದರಿ ಪೌಚ್ ಗಳು ಖಾಲಿ ಇರುತ್ತವೆ ಎಂದರೆ ಸಾಕ್ಷಿಯೂ FSL ಪರೀಕ್ಷೇಗೆ ಕಳುಹಿಸಿದಾಗ ಖಾಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮು. ಮಾ. 1 ರ ತರಹ ಪೌಚ್ ಗಳು ಎಲ್ಲಾ ಸರಾಯಿ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ನನ್ನ ಹೇಳಿಕೆಯನ್ನು ನಾನೇ ನೀಡಿರುತ್ತೇನೆ ನನ್ನ ಮೇಲಾಧಿಕಾರಿಗಳು ಹೇಳಿ ಬರೆಸಿರುವುದಿಲ್ಲ. ನಾನು ಹೇಳಿದ್ದ ರೀತಿ ದಿನಾಂಕ ಮತ್ತು ಸಮಯವನ್ನು ನಮೂದು ಮಾಡಿಕೊಂಡಿರುತ್ತಾರೆ. ನನ್ನ ಹೇಳಿಕೆಯಲ್ಲಿ ನಮೂದಿಸಿದ ವಿಷಯಗಳು ಸರಿಯಾಗಿ ಇರುತ್ತೇವೆ. ಸಾಕ್ಷಿಗೆ ಈಗ ಅವರ ಹೇಳಿಕೆಯನ್ನು ತೋರಿಸಿ ಅದರಲ್ಲಿ ಸಮಯ ರಾತ್ರಿ 8.30 ಗಂಟೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯೂ ಸಾಕ್ಷಿ ಹೇಳುವಾಗ ನಜರುಚೂಕಿನಿಂದ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳಿಕೆ ಕೊಟ್ಟ ನಂತರ ಅದನ್ನು ಓದಿ ನೋಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿಕೆಯನ್ನು ಓದಿದ ನಂತರ ಸಮಯದಲ್ಲಿ ತಿದ್ದುಪಡಿ ಮಾಡಬೇಕೆಂದು ಹೇಳಿರುವುದಿಲ್ಲ ಎಂದರೆ ಸರಿ. ನಾವು ಜಪ್ತಿ ಪಡಿಸಿಕೊಂಡ ಮು. ಮಾ 2 ರ ಮುಖಬೆಲೆ ಎಂದರೆ 100 ರೂಪಾಯಿ 4 ನೋಟುಗಳು 50 ರೂಪಾಯಿ 1 ನೋಟು ಇತ್ತು ಸದರಿ ವಿಷಯವನ್ನು ಪಂಚನಾಮೆಯಲ್ಲಿ ಮತ್ತು ನನ್ನ ಹೇಳಿಕೆಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ ಆರೋಪಿಗೂ ಮೂ.ಮಾಲಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ದಿಃ 22-02-2025 ರಂದು ನಾನು ಠಾಣೆಯಲ್ಲಿ ಇದ್ದಾಗ ಚಾಸ-1ರವರು ಹಿರೋಳ್ಳಿ ಗ್ರಾಮದಲ್ಲಿ ಅಕ್ರಮ ಸಾರಾಯಿ ಮಾರಟ ಮಾಡುವ ಬಗ್ಗೆ ಖಚಿತ ಬಾತ್ಮಿ ಬಂದಿದ್ದು, ನಾನು ಮತ್ತು ಚಾಸ-5ರವರು ಚಾಸ-1ರವರ ಜೋತೆಗೆ ದಾಳಿ ಮಾಡಲು ಹೋಗಬೇಕು ಎಂದು ಹೇಳಿ ಚಾಸ-5 ರವರು ಜೀಪು ಚಾಲಾನೆ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ . ನಾವು ಸರ್ಕಾರಿ ವಾಹನವಾದ ಕೆ. ಎ. 32 ಜಿ-1028 ರಲ್ಲಿ ಹೋಗಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ ಹಿರೋಳ್ಳಿ ಗ್ರಾಮದಲ್ಲಿ ವಾಹನವನ್ನು ನಿಲ್ಲಿಸಿ ಇಬ್ಬರು ಪಂಚರಾದ ಚಾಸಾ 2 ಮತ್ತು 3 ರವರನ್ನು ಕರೆಯಿಸಿ ಅವರಿಗೆ ವಿಷಯ ತಿಳಿಸಿ ಅವರು ಒಪ್ಪಿ ಕೊಂಡ ನಂತರ ಎಲ್ಲರೂ ಕೂಡಿಕೊಂಡು ಶ್ರೇಯಸ್ ಪಾನಶಾಪ್ ಹತ್ತಿರ ಸ್ವಲ್ಪ ದೂರದಲ್ಲಿ ನಿಲ್ಲಿಸಿ ನಾವೆಲ್ಲರೂ ಅಲ್ಲಿ ಹೋಗಿ ನೋಡಿದಾಗ ಗುರುಬಸಪ್ಪ ಅವರು ಒಂದು ರಟ್ಟಿನ ಡಬ್ಬಿಯಲ್ಲಿ ಸರಾಯಿಯನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದನು ಎಂದು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ . ಸದರಿ ವ್ಯಕ್ತಿಯ ಬಳಿ Original Choice Wiskyಯ 75 ಪೌಚ್ ಗಳು ಮತ್ತು 450 ರೂಪಾಯಿ ನಗದು ಹಣ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ಜಪ್ತಿಪಡಿಸಿಕೊಂಡು ಪಂಚನಾಮೆಯನ್ನು 10.30 ರಿಂದ 11.30ರವರೆಗೆ ಜರುಗಿಸಿ ಪಂಚರ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಹಾಕಿ ಜಪ್ತಿ ಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಮರಳಿ 12.00 ಗಂಟೆಗೆ ಠಾಣೆಗೆ ಬಂದಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ